ಗೋಮಾಳ ಅಕ್ರಮಣ ಹಾಗೂ ಅರಣ್ಯ ನಾಶ ಮಾಡುತ್ತಿರುವ ಬಗ್ಗೆ.

೭೪೫. **ಶ್ರೀಮತಿ ಸುಮಾವಸಂತ್** (ವಿರಾಜ್‌ಪೇಟೆ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗಿನ ದೇವರ ಕಾಡು, ಗೋಮಾಳವನ್ನು ಅಕ್ರಮಿಸಿರುವುದು ಹಾಗೂ ಕರಿಕೆಯ ಮೊಂಗನಮಲೆ, ಬಾಜಿಮಲೆ, ಉಡುಂಬೆ ಅರಣ್ಯ ಪ್ರದೇಶದಲ್ಲಿ ಅರಣ್ಯ ಸಂಪತ್ತು ನಾಶವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಸಂಪತ್ತನ್ನು ರಕ್ಷಿಸಲು ಕೈಗೊಂಡ ಕ್ರಮವೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ದೇವರ ಕಾಡನ್ನು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಕೊಡಗಿನ ಗೋಮಾಳದ ಅತಿಕ್ರಮಣದ ಬಗ್ಗೆ ಅರಣ್ಯ ಇಲಾಖೆಗೆ ವಿಷಯ ತಿಳಿದಿಲ್ಲ. ಕಾರಣ ಅಂತಹ ಗೋಮಾಳ ಜಾಗಗಳು ಕಂದಾಯ ಇಲಾಖೆಯ ಅಧೀನದಲ್ಲಿವೆ. ಕರಿಕೆಯ ಮೊಂಗನಮಲೆ, ಬಾಜಿಮಲೆ ಮತ್ತು ಉಡುಂಬೆ ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಸಂಪತ್ತು ನಾಶವಾಗುತ್ತಿಲ್ಲ.

ಆ) ಕೊಡಗಿನ ದೇವರ ಕಾಡು ಮಟ್ಟಿಗೆ ಅತಿಕ್ರಮಣವನ್ನು ಪತ್ತೆಹಚ್ಚಲು ಕಂದಾಯ ಇಲಾಖೆ ಮತ್ತು ಅರಣ್ಯ ಕಾರ್ಯ ಯೋಜನಾ ವಿಭಾಗ, ಮೈಸೂರು ಇವರಿಂದ ಸರ್ವೆ ಕೆಲಸ ಕೈಗೊಳ್ಳಲಾಗಿದೆ. ಹಾಗೆನೆ ದೇವರ ಕಾಡುಗಳ ರಕ್ಷಣೆಗಾಗಿ ಸೂಕ್ತ ಸಿಬ್ಬಂದಿಗಳನ್ನು ಒದಗಿಸುವ ಪ್ರಸ್ತಾವನೆ ಅರಣ್ಯ ಇಲಾಖೆಯ ಪರಿಶೀಲನೆಯಲ್ಲಿದೆ.

ರಾಮಗುಂಡಂ ಶಾಖೋತ್ಪನ್ನ ಕೇಂದ್ರದಿಂದ ಸಂದಾಯವಾಗುತ್ತಿರುವ ವಿದ್ಯುತ್ ಪ್ರಮಾಣ,

೫೮೪. (ಡಿ)**ಶ್ರೀ ಎನ್. ಎಂ. ಅಡ್ಯಂತಾಯ** (ಸುರತ್ಕಲ್).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ರಾಮಗುಂಡಂ ಸೂಪರ್ ಥರ್ಮಲ್ ವಿದ್ಯುತ್ ಯೋಜನೆಯಿಂದ ಪಡೆಯುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು ?

ಆ) ಈ ಯೋಜನೆಯಲ್ಲಿ ರಾಜ್ಯದ ವಿದ್ಯುಚ್ಛಕ್ತಿಯ ಪಾಲು ಎಷ್ಟು ?

ಇ) ಹೆಚ್ಚುವರಿ ವಿದ್ಯುತ್‌ನ್ನು ದೊರಕಿಸಿಕೊಳ್ಳಲು ಸರ್ಕಾರದವರು ಕೈಗೊಂಡಿರುವ ಕಾರ್ಯ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೧-೪-೮೬ ರಿಂದ ೩೧-೧೨-೮೬ರವರೆಗೆ ೭೨೭ ದಶಲಕ್ಷ ಯೂನಿಟ್‌ಗಳು ಬಂದಿದೆ.

ಆ) ಶೇಕಡಾ ೧೮.೮೨

ಇ) ಪಾಲು ಮಾಡದಿರುವ ಶೇಕಡಾ ೧೫ನ್ನು ರಾಜ್ಯಕ್ಕೆ ಕೊಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ರಾಜ್ಯದಲ್ಲಿನ ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳ ಬಗ್ಗೆ.

೫೯೬. **ಶ್ರೀ ಎಂ. ಎನ್. ಅಡ್ಯಂತಾಯ** (ಸುರತ್ಕಲ್).—ಮಾನ್ಯ ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆಗೆ ಲೈಸೆನ್ಸ್‌ಗಳನ್ನು ನೀಡಲಾದ ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳು ಎಷ್ಟು ?

ಆ) ಅದರಲ್ಲಿ ಉತ್ಪಾದನೆಯಂನ್ನು ಆರಂಭಿಸಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ?